# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೨, **ಆಗಸ್ಟ್**, ೨೦೨೫( **ಶ್ರಾವಣ** ,೨೧, ಶಕವರ್ಷ, ೧೯೪೭)<br>BENGALURU, TUESDAY, 12, AUGUST, 2025 ( SHRAVANA ,21 , SHAKAVARSHA, 1947) | ನಂ. ೪೭೨<br>No. 472 |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–34)**

ಕರ್ನಾಟಕ ರಾಜ್ಯದಲ್ಲಿ ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006ನ್ನು ಅಳವಡಿಸಿಕೊಳ್ಳುವುದಕ್ಕಾಗಿ ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 (2007ರ ಕೇಂದ್ರ ಅಧಿನಿಯಮ 6)ನ್ನು ಅಳವಡಿಸಿಕೊಳ್ಳುವುದಕ್ಕಾಗಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. 9ಎ ಹೊಸ ಪ್ರಕರಣದ ಸೇರ್ಪಡೆ.-** ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 (2007ರ ಕೇಂದ್ರ ಅಧಿನಿಯಮ 6) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 9ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"9ಎ. ಬಾಲ್ಯ ವಿವಾಹಕ್ಕೆ ಪ್ರಯತ್ನಿಸುವುದು ಮತ್ತು ಸಿದ್ಧತೆ ಮಾಡುವುದಕ್ಕಾಗಿ ಅಥವಾ ಬಾಲ್ಯ ನಿಶ್ಚಿತಾರ್ಥಕ್ಕೆ ಪ್ರಯತ್ನಿಸುವುದು ಮತ್ತು ಸಿದ್ಧತೆ ಮಾಡುವುದಕ್ಕಾಗಿ ದಂಡನೆ.-** ಯಾರಾದರೂ, ಬಾಲ್ಯ ವಿವಾಹಕ್ಕೆ ಪ್ರಯತ್ನಿಸುವುದು ಮತ್ತು ಸಿದ್ಧತೆ ಮಾಡುವುದು ಅಥವಾ ಬಾಲ್ಯ ನಿಶ್ಚಿತಾರ್ಥಕ್ಕೆ ಪ್ರಯತ್ನಿಸುವುದು ಮತ್ತು ಸಿದ್ಧತೆ ಮಾಡಿದರೆ ಎರಡು ವರ್ಷಗಳಿಗೆ ವಿಸ್ತರಿಸಬಹುದಾದ

ಕಠಿಣ ಕಾರಾವಾಸದೊಂದಿಗೆ ಅಥವಾ ಒಂದು ಲಕ್ಷ ರೂಪಾಯಿಯವರಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು."

**3. ಪ್ರಕರಣ 10ರ ತಿದ್ದುಪಡಿ.-** ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಯಲ್ಲಿನ "ನೆರವೇರಿಸುವುದಕ್ಕೆ" ಎಂಬ ಪದಗಳಿಗೆ ಬದಲಾಗಿ "ಸಿದ್ಧಗೊಳಿಸುವುದಕ್ಕೆ ಮತ್ತು ನೆರವೇರಿಸುವುದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

(ii) "ದುಷ್ಪ್ರೇರೇಪಿಸುವ" ಎಂಬ ಪದಗಳ ತರುವಾಯ "ಅಥವಾ ಸಿದ್ಧಗೊಳಿಸುವ, ನಿಶ್ಚಿತಾರ್ಥದಲ್ಲಿ ತೊಡಗುವ" ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಸೇರಿಸತಕ್ಕದು.

**4. ಹೊಸ ಪ್ರಕರಣ 12ಎ ಸೇರ್ಪಡೆ.-** ಮೂಲ ಅಧಿನಿಯಮದ 12ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"12ಎ. ಅಪ್ರಾಪ್ತ ವಯಸ್ಕ ಮಗುವಿನ ನಿಶ್ಚಿತಾರ್ಥವನ್ನು ಅನೂರ್ಜಿತಗೊಳಿಸುವುದು.-** ಅಪ್ರಾಪ್ತ ವಯಸ್ಸಿನ ಮಗುವನ್ನು ವಿವಾಹದ ಉದ್ದೇಶಕ್ಕಾಗಿ ನಿಶ್ಚಿತಾರ್ಥಗೊಳಿಸಿದಾಗ, ಅಂಥ ನಿಶ್ಚಿತಾರ್ಥವು ಅಕೃತ ಮತ್ತು ಅನೂರ್ಜಿತವಾಗತಕ್ಕದ್ದು."

**5. ಪ್ರಕರಣ 13ಎ ಸೇರ್ಪಡೆ.-** ಮೂಲ ಅಧಿನಿಯಮದ 13ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**13ಎ. ಬಾಲ್ಯ ನಿಶ್ಚಿತಾರ್ಥವನ್ನು ನಿಷೇಧಿಸುವ ನಿರ್ಬಂಧಕಾಜ್ಞೆಯನ್ನು ಹೊರಡಿಸಲು ನ್ಯಾಯಾಲಯದ ಅಧಿಕಾರ.-** ಈ ಅಧಿನಿಯಮದಲ್ಲಿ ತದ್ವಿರುದ್ಧವಾದದು ಏನೇ ಒಳಗೊಂಡಿದ್ದರೂ, ಬಾಲ್ಯ ವಿವಾಹ ನಿಷೇಧ ಅಧಿಕಾರಿಯ ಅರ್ಜಿಯ ಮೇಲೆ ಅಥವಾ ಯಾರೇ ವ್ಯಕ್ತಿಯ ದೂರಿನ ಮೂಲಕ ಅಥವಾ ಅನ್ಯಥಾ ಮಾಹಿತಿ ಮೇರೆಗೆ, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನು, ಈ ಅಧಿನಿಯವನ್ನು ಉಲ್ಲಂಘಿಸಿ ನಿಶ್ಚಿತಾರ್ಥವನ್ನು ಆಯೋಜಿಸಿರುವುದಾಗಿ ಅಥವಾ ನಡೆಸುವ ಬಗ್ಗೆ ಮನದಟ್ಟಾದರೆ, ಅಂಥ ಮ್ಯಾಜಿಸ್ಟ್ರೇಟನು ಯಾವುದೇ ಸಂಘಟನೆಯ ಸದಸ್ಯ ಅಥವಾ ವ್ಯಕ್ತಿಗಳ ಸಂಘವನ್ನೊಳಗೊಂಡು ಯಾರೇ ವ್ಯಕ್ತಿಯ ವಿರುದ್ಧ ಅಂಥ ನಿಶ್ಚಿತಾರ್ಥವನ್ನು ನಿಷೇಧಿಸುವ ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 (2007ರ ಕೇಂದ್ರ ಅಧಿನಿಯಮ 6)ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(1) ಬಾಲ್ಯ ವಿವಾಹಕ್ಕೆ ಪ್ರಯತ್ನಿಸುವುದು ಮತ್ತು ಸಿದ್ಧತೆ ಮಾಡುವುದು ಅಥವಾ ಬಾಲ್ಯ ನಿಶ್ಚಿತಾರ್ಥಕ್ಕೆ ಪ್ರಯತ್ನಿಸುವುದು ಮತ್ತು ಸಿದ್ಧತೆ ಮಾಡುವುದಕ್ಕಾಗಿ ದಂಡನೆಯ ಕುರಿತಾದ ಉಪಬಂಧವನ್ನು ಕಲ್ಪಿಸಲು ;

(2) ವಿವಾಹದ ಉದ್ದೇಶಕ್ಕಾಗಿ ನಿಶ್ಚಯಿಸಲಾದ ಅಪ್ರಾಪ್ತ ವಯಸ್ಸಿನ ಮಗುವಿನ ನಿಶ್ಚಿತಾರ್ಥವನ್ನು ಅಕೃತ ಮತ್ತು ಅನೂರ್ಜಿತವೆಂದು ಘೋಷಿಸಲು; ಮತ್ತು

(3) ಬಾಲ್ಯ ನಿಶ್ಚಿತಾರ್ಥವನ್ನು ನಿಷೇಧಿಸಿಸುವ ನಿರ್ಬಂಧಕಾಜ್ಞೆಯನ್ನು ಹೊರಡಿಸಲು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮೆಟ್ರೋಪಾಲಿನ್ ಮ್ಯಾಜಿಸ್ಟ್ರೇಟರಿಗೆ ಅಧಿಕಾರವನ್ನು ನೀಡಲು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಲಕ್ಷ್ಮೀ ಹೆಬ್ಬಾಳ್ಕರ್**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ
## ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 (2007ರ ಕೇಂದ್ರ ಅಧಿನಿಯಮ 6)ರ ಉದ್ಧೃತ ಭಾಗ

**XXX XXX XXX**

**9. ಮಗುವನ್ನು ವಿವಾಹವಾಗುವ ವಯಸ್ಕ ಪುರುಷನಿಗೆ ದಂಡನೆ.-** ಬಾಲ್ಯ ವಿವಾಹ ಮಾಡಿಕೊಳ್ಳುವ ಹದಿನೆಂಟು ವರ್ಷ ವಯಸ್ಸು ಮೀರಿದ ಯಾರೇ ವಯಸ್ಕ ಪುರುಷನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**XXX XXX XXX**

**10. ಬಾಲ್ಯ ವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ದಂಡನೆ.-** ಯಾವುದೇ ಬಾಲ್ಯ ವಿವಾಹವನ್ನು ನೆರವೇರಿಸುವ, ನಡೆಸುವ, ನಿರ್ದೇಶಿಸುವ ಅಥವಾ ದುಷ್ಪ್ರೇರೇಪಿಸುವ ಯಾವನೇ ವ್ಯಕ್ತಿಯು, ಆ ವಿವಾಹವು ಬಾಲ್ಯ ವಿವಾಹವಾಗಿರಲಿಲ್ಲವೆಂದು ನಂಬಲು ತನಗೆ ಕಾರಣಗಳು ಇದ್ದುವೆಂದು ಅವನು ರುಜುವಾತುಪಡಿಸಿದ ಹೊರತು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**XXX XXX XXX**

**12. ಕೆಲವು ಸನ್ನಿವೇಶಗಳಲ್ಲಿ ಅಪ್ರಾಪ್ತ ವಯಸ್ಕ ಮಗುವಿನ ವಿವಾಹವನ್ನು ಶೂನ್ಯಗೊಳಿಸುವುದು.-** ಅಪ್ರಾಪ್ತ ವಯಸ್ಕ ಮಗುವನ್ನು,-

(ಎ) ಕಾನೂನುಬದ್ಧ ಪೋಷಕನ ಬಳಿಯಿಂದ ಕರೆದೊಯ್ದಲ್ಲಿ ಅಥವಾ ಆತನ ಬಳಿಯಿಂದ ಪುಸಲಾಯಿಸಿ ಕರೆದುಕೊಂಡು ಹೋಗಿರುವಲ್ಲಿ; ಅಥವಾ

(ಬಿ) ಬಲವಂತವಾಗಿ ಒತ್ತಾಯ ಮಾಡಿ ಅಥವಾ ಯಾವುದೇ ಮೋಸದ ವಿಧಾನದಿಂದ ಯಾವುದೇ ಸ್ಥಳದಿಂದ ಹೊರಹೋಗುವಂತೆ ಪ್ರೇರೇಪಿಸಿದಲ್ಲಿ; ಅಥವಾ

(ಸಿ) ವಿವಾಹದ ಉದ್ದೇಶಕ್ಕಾಗಿ ಮಾರಾಟ ಮಾಡಿದಲ್ಲಿ; ಮತ್ತು ಯಾವುದೇ ರೀತಿಯಲ್ಲಿ ವಿವಾಹವಾಗುವಂತೆ ಮಾಡಿದಲ್ಲಿ, ಅಥವಾ ಅಪ್ರಾಪ್ತ ವಯಸ್ಕನಿಗೆ ವಿವಾಹವಾಗಿದ್ದು ಆ ತರುವಾಯ ಆ ಅಪ್ರಾಪ್ತ ವಯಸ್ಕನನ್ನು ಅನೈತಿಕ ಉದ್ದೇಶಗಳಿಗಾಗಿ ಮಾರಾಟ ಮಾಡಿದರೆ, ಅಥವಾ ದುರ್ವ್ಯಾಪಾರಕ್ಕೆ ಒಳಪಡಿಸಿದರೆ ಅಥವಾ ಬಳಸಿಕೊಂಡರೆ - ಅಂಥ ವಿವಾಹವು ಅಕೃತ ಮತ್ತು ಶೂನ್ಯವಾಗತಕ್ಕದ್ದು.

**13. ಬಾಲ್ಯ ವಿವಾಹವನ್ನು ನಿಷೇಧಿಸುವ ನಿರ್ಬಂಧಕಾಜ್ಞೆಯನ್ನು ಹೊರಡಿಸುವುದಕ್ಕೆ ನ್ಯಾಯಾಲಯದ ಅಧಿಕಾರ.-** (1) ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಬಾಲ್ಯ ವಿವಾಹ ನಿಷೇಧ ಅಧಿಕಾರಿಯ ಅರ್ಜಿಯ ಮೇಲೆ

ಅಥವಾ ಯಾವನೇ ವ್ಯಕ್ತಿಯ ದೂರಿನ ಮುಖಾಂತರ ಅಥವಾ ಅನ್ಯಥಾ ಪಡೆದ ಮಾಹಿತಿಯ ಮೇಲೆ, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಥವಾ ಮಹಾನಗರ ಮ್ಯಾಜಿಸ್ಟ್ರೇಟನಿಗೆ ಈ ಅಧಿನಿಯಮವನ್ನು ಉಲ್ಲಂಘಿಸಿ ಬಾಲ್ಯ ವಿವಾಹ ಏರ್ಪಾಡು ಮಾಡಲಾಗಿದೆಯೆಂದು ಅಥವಾ ವಿವಾಹವು ಶಾಸ್ತ್ರೋಕ್ತವಾಗಿ ನೆರವೇರಲಿರುವುದೆಂದು ಮನದಟ್ಟಾದರೆ, ಅಂಥ ಮ್ಯಾಜಿಸ್ಟ್ರೇಟನು ಅಂಥ ವಿವಾಹವನ್ನು ನಿಷೇಧಿಸಿ ಯಾವುದೇ ಸಂಘಟನೆಯ ಅಥವಾ ವ್ಯಕ್ತಿಗಳ ಸಂಘದ ಸದಸ್ಯನೂ ಸೇರಿದಂತೆ ಯಾವನೇ ವ್ಯಕ್ತಿಯ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದು.

(2) ಬಾಲ್ಯ ವಿವಾಹವನ್ನು ಅಥವಾ ಬಾಲ್ಯ ವಿವಾಹಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವ ಸಾಧ್ಯತೆಗೆ ಸಂಬಂಧಿಸಿದಂತೆ ತನಗೆ ತಿಳಿದ ಅಥವಾ ನಂಬಲು ಕಾರಣವನ್ನು ಹೊಂದಿರುವ ಯಾವನೇ ವ್ಯಕ್ತಿಯು ಮತ್ತು ಯುಕ್ತ ಮಾಹಿತಿಯನ್ನು ಹೊಂದಿರುವ ಸರ್ಕಾರೇತರ ಸಂಸ್ಥೆಯು (1)ನೇ ಉಪ ಪ್ರಕರಣದ ಮೇರೆಗೆ ದೂರನ್ನು ಸಲ್ಲಿಸಬಹುದು.

(3) ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮಹಾನಗರ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಯಾವುದೇ ನಂಬಲರ್ಹ ವರದಿಯ ಅಥವಾ ಮಾಹಿತಿಯ ಆಧಾರದ ಮೇಲೆ ತಾನಾಗಿಯೇ ಸಂಜ್ಞೇಯತೆಯನ್ನು ತೆಗೆದುಕೊಳ್ಳಬಹುದು.

(4) ಅಕ್ಷಯ ತೃತೀಯದಂತಹ ಕೆಲವು ದಿನಗಳಂದು ಸಾಮೂಹಿಕ ಬಾಲ್ಯ ವಿವಾಹವು ಶಾಸ್ತ್ರೋಕ್ತವಾಗಿ ನೆರವೇರುವುದನ್ನು ತಡೆಯುವ ಉದ್ದೇಶಗಳಿಗಾಗಿ, ಜಿಲ್ಲಾ ಮ್ಯಾಜಿಸ್ಟ್ರೇಟನನ್ನು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಬಾಲ್ಯ ವಿವಾಹ ನಿಷೇಧ ಅಧಿಕಾರಿಗೆ ಪ್ರದತ್ತವಾದಂಥ ಎಲ್ಲಾ ಅಧಿಕಾರಗಳನ್ನು ಹೊಂದಿರುವ ಬಾಲ್ಯ ವಿವಾಹ ನಿಷೇಧ ಅಧಿಕಾರಿಯೆಂದು ಭಾವಿಸತಕ್ಕದ್ದು.

(5) ಜಿಲ್ಲಾ ಮ್ಯಾಜಿಸ್ಟ್ರೇಟನು ಬಾಲ್ಯವಿವಾಹ ಶಾಸ್ತ್ರೋಕ್ತವಾಗಿ ನೆರವೇರುವುದನ್ನು ನಿಲ್ಲಿಸಲು ಅಥವಾ ತಡೆಯಲು ಹೆಚ್ಚುವರಿ ಅಧಿಕಾರಗಳನ್ನು ಸಹ ಹೊಂದಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವನು ಎಲ್ಲಾ ಯುಕ್ತ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಗತ್ಯವಾದ ಕನಿಷ್ಠ ಬಲಪ್ರಯೋಗ ಮಾಡಬಹುದು.

(6) ನ್ಯಾಯಾಲಯವು ಸಂದರ್ಭಾನುಸಾರ ಅಂಥ ವ್ಯಕ್ತಿಗೆ, ಯಾವುದೇ ಸಂಘಟನೆಯ ಸದಸ್ಯರಿಗೆ ಅಥವಾ ವ್ಯಕ್ತಿಗಳ ಸಂಘದ ಯಾವನೇ ಸದಸ್ಯನಿಗೆ ಈ ಮುಂಚಿತವಾಗಿ ನೋಟೀಸು ನೀಡಿದ್ದ ಹೊರತು ಮತ್ತು ನಿರ್ಬಂಧಕಾಜ್ಞೆಯನ್ನು ಹೊರಡಿಸುವುದರ ವಿರುದ್ಧ ಕಾರಣವನ್ನು ತೋರಿಸುವುದಕ್ಕೆ ಅವನಿಗೆ ಅಥವಾ ಅವುಗಳಿಗೆ ಅವಕಾಶ ನೀಡಿದ್ದ ಹೊರತು, ಯಾವನೇ ವ್ಯಕ್ತಿಯ ಅಥವಾ ಯಾವುದೇ ಸಂಘಟನೆಯ ಅಥವಾ ವ್ಯಕ್ತಿಗಳ ಸಂಘದ ಯಾವನೇ ವ್ಯಕ್ತಿಯ ಹೊರಡಿಸತಕ್ಕದ್ದಲ್ಲ: ವಿರುದ್ಧ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ನಿರ್ಬಂಧಕಾಜ್ಞೆಯನ್ನು ಪರಂತು,

ಯಾವುದೇ ತುರ್ತು ಸಂದರ್ಭದಲ್ಲಿ, ಈ ಪ್ರಕರಣದ ಮೇರೆಗೆ ಯಾವುದೇ ನೋಟೀಸು ನೀಡದೆ ಮಧ್ಯಂತರ ನಿರ್ಬಂಧಕಾಜ್ಞೆಯನ್ನು ಹೊರಡಿಸುವುದಕ್ಕೆ ನ್ಯಾಯಾಲಯವು ಅಧಿಕಾರ ಹೊಂದಿರತಕ್ಕದ್ದು.

(7) ಯಾವ ಪಕ್ಷಕಾರನ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆಯೋ ಆ ಪಕ್ಷಕಾರನಿಗೆ ನೋಟೀಸು ನೀಡಿದ ತರುವಾಯ ಮತ್ತು ಅಹವಾಲನ್ನು ಆಲಿಸಿದ ತರುವಾಯ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ನಿರ್ಬಂಧಕಾಜ್ಞೆಯನ್ನು ಸ್ಥಿರೀಕರಿಸಬಹುದು ಅಥವಾ ತೆರವುಗೊಳಿಸಬಹುದು.

(8) ನ್ಯಾಯಾಲಯವು ತಾನಾಗಿಯೇ ಆಗಲಿ ಅಥವಾ ಯಾವನೇ ಬಾಧಿತ ವ್ಯಕ್ತಿಯ ಅರ್ಜಿಯ ಮೇಲಾಗಲಿ (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ನಿರ್ಬಂಧಕಾಜ್ಞೆಯನ್ನು ರದ್ದುಗೊಳಿಸಬಹುದು ಅಥವಾ ಬದಲಾವಣೆ ಮಾಡಬಹುದು.

(9) (1)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿರುವಲ್ಲಿ, ನ್ಯಾಯಾಲಯವು, ಅರ್ಜಿದಾರನಿಗೆ ಖುದ್ದಾಗಿ ಅಥವಾ ವಕೀಲನ ಮೂಲಕ ತನ್ನ ಮುಂದೆ ಹಾಜರಾಗಲು ಅವಕಾಶ ಕೊಡತಕ್ಕದ್ದು ಮತ್ತು ನ್ಯಾಯಾಲಯವು ಅರ್ಜಿದಾರನನ್ನು ವಿಚಾರಣೆ ಮಾಡಿದ ತರುವಾಯ ಅರ್ಜಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ತಿರಸ್ಕರಿಸಿದರೆ, ಹಾಗೆ ಮಾಡಿದ ಬಗ್ಗೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(10) (1)ನೇ ಉಪ-ಪ್ರಕರಣದ ಮೇರೆಗೆ ತನ್ನ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆಯೆಂದು ತಿಳಿದಿರುವ ಯಾವನೇ ವ್ಯಕ್ತಿಯು, ಅಂಥ ನಿರ್ಬಂಧಕಾಜ್ಞೆಯನ್ನು ಉಲ್ಲಂಘಿಸಿದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು: ಪರಂತು, ಯಾವ ಮಹಿಳೆಯೂ ಕಾರಾವಾಸದಿಂದ ದಂಡಿತಳಾಗತಕ್ಕದ್ದಲ್ಲ.

**XXX XXX XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**SEVENTH SESSION**

# THE PROHIBITION OF CHILD MARRIAGE (KARNATAKA AMENDMENT) BILL, 2025

**(LA Bill No. 34 of 2025)**

A Bill to amend the Prohibition of Child Marriage Act, 2006 in its application to the State of Karnataka.

Whereas, it is expedient to amend the Prohibition of Child Marriage Act, 2006 (Central Act 6 of 2007), in its application to State of Karnataka, for the purposes hereinafter appearing;

Be it enacted by the Karnataka State Legislature in the Seventy Sixth year of the Republic of India, as follows:-

**1. Short title and commencement. -** (1) This Act may be called the Prohibition of Child Marriage (Karnataka Amendment) Act, 2025.

(2) It shall come into force on such a date as the State Government may, by notification in the official Gazette, appoint.

**2. Insertion of new section 9A. -** In the Prohibition of Child Marriage Act, 2006 (Central Act 6 of 2007) (hereinafter referred to as the principal Act), after section 9, the following shall be inserted, namely:-

"**9A Punishment for attempt and preparation to make child marriage or attempt and preparation to make engagement of a child.-** Whoever, make an attempt and preparation to make child marriage or attempt and preparation to make engagement of a child shall be punishable with rigorous imprisonment which may extend to two years or with fine which may extend to one lakh rupees or with both".

**3. Amendment of section 10.-** In the principal Act, in section 10,-

(i) in the heading, for the word "solemnising", the words "Preparation and solemnising", shall be substituted; and

(ii) after the words "abets any child marriage", the words "or involves in preparation, engagement of child marriage", shall be inserted.

**4. Insertion of new section 12A . -** In the principal Act, after section 12, the following shall be inserted, namely:-

"**12A engagement of a minor child to be void.-** Where a child being a minor is engaged for the purpose of the marriage, such engagement shall be null and void."

**5. Insertion of new section 13A. -** In the principal Act, after section 13, the following shall be inserted, namely:-

**"13A. Power of court to issue injunction prohibiting child engagement.-** Notwithstanding anything to the contrary contained in this Act, if, on an application of the Child Marriage Prohibition Officer or on receipt of information through a complaint or otherwise from any person, a Judicial Magistrate of the first class or a Metropolitan Magistrate is satisfied that a child engagement in contravention of this Act has been arranged or is about to be performed, such Magistrate shall issue an injunction against any person including a member of an organisation or an association of persons prohibiting such engagement."

## STATEMENT OF OBJECTS AND REASONS

It is considered necessary to amend the Prohibition of Child Marriage Act, 2006 (Central Act 6 of 2007) in its application to the State of Karnataka,-

(1) to make provision regarding punishment for attempt and preparation to make a child marriage or attempt and preparation to make engagement of a child;

(2) to declare engagement of a child being a minor is engaged for the purpose of the marriage to be null and void; and

(3) to empower judicial magistrate of the first class or a metropolitan magistrate to issue injunction prohibiting child engagement.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**LAKSHMI HEBBALKAR**
Minister of Women and Child Development,
Disabled and Senior-Citizens Empowerment of
Karnataka

**M.K. VISHALAKSHI**
Secretary
Karnataka Legislative Assembly

**ANNEXURE**
**EXTRACT FROM THE PROHIBITION OF CHILD MARRIAGE ACT, 2006**
**(CENTRAL ACT NO 06 OF 2007)**

**XXX XXX XXX**

**9. Punishment for male adult marrying a child.-** Whoever, being a male adult above eighteen years of age, contracts a child marriage shall be punishable with rigorous imprisonment which may extend to two years or with fine which may extend to one lakh rupees or with both.

**XXX XXX XXX**

**10. Punishment for solemnising a child marriage.-** Whoever performs, conducts, directs or abets any child marriage shall be punishable with rigorous imprisonment which may extend to two years and shall be liable to fine which may extend to one lakh rupees unless he proves that he had reasons to believe that the marriage was not a child marriage.

**XXX XXX XXX**

**12. Marriage of a minor child to be void in certain circumstances.-** Where a child, being a minor,-

(a) is taken or enticed out of the keeping of the lawful guardian; or

(b) by force compelled, or by any deceitful means induced to go from any place; or

(c) is sold for the purpose of marriage; and made to go through a form of marriage or if the minor is married after which the minor is sold or trafficked or used for immoral purposes, such marriage shall be null and void.

**XXX** **XXX** **XXX**

**13. Power of court to issue injunction prohibiting child marriages.-** (1) Notwithstanding anything to the contrary contained in this Act, if, on an application of the Child Marriage Prohibition Officer or on receipt of information through a complaint or otherwise from any person, a Judicial Magistrate of the first class or a Metropolitan Magistrate is satisfied that a child marriage in contravention of this Act has been arranged or is about to be solemnised, such Magistrate shall issue an injunction against any person including a member of an organisation or an association of persons prohibiting such marriage.

(2) A complaint under sub-section (1) may be made by any person having personal knowledge or reason to believe, and a non-governmental organisation having reasonable information, relating to the likelihood of taking place of solemnisation of a child marriage or child marriages.

(3) The Court of the Judicial Magistrate of the first class or the Metropolitan Magistrate may also take suomotu cognizance on the basis of any reliable report or information.

(4) For the purposes of preventing solemnisation of mass child marriages on certain days such as AkshayaTrutiya, the District Magistrate shall be deemed to be the Child Marriage Prohibition Officer with all powers as are conferred on a Child Marriage Prohibition Officer by or under this Act.

(5) The District Magistrate shall also have additional powers to stop or prevent solemnisation of child marriages and for this purpose, he may take all appropriate measures and use the minimum force required.

(6) No injunction under sub-section (1) shall be issued against any person or member of any organisation or association of persons unless the Court has previously given notice to such person, members of the organisation or association of persons, as the case may be, and has offered him or them an opportunity to show cause against the issue of the injunction:

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



Provided that, in the case of any urgency, the Court shall have the power to issue an interim injunction without giving any notice under this section.

(7) An injunction issued under sub-section (1) may be confirmed or vacated after giving notice and hearing the party against whom the injunction was issued.

(8) The Court may either on its own motion or on the application of any person aggrieved, rescind or alter an injunction issued under sub-section (1).

(9) Where an application is received under sub-section (1), the Court shall afford the applicant an early opportunity of appearing before it either in person or by an advocate and if the Court, after hearing the applicant rejects the application wholly or in part, it shall record in writing its reasons for so doing.

(10) Whoever knowing that an injunction has been issued under sub-section (1) against him disobeys such injunction shall be punishable with imprisonment of either description for a term which may extend to two years or with fine which may extend to one lakh rupees or with both:

Provided that, no woman shall be punishable with imprisonment.

**XXX XXX XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH